# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: ೨೦-೧೦-೨೦೨೨ ರಂದು ಅಪರಾಹ್ನ ೩.೦೦ ಗಂಟೆಗೆ ನಡೆದ "ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡವಳಿಗಳು.

<u>ಹಾಜರಿದ್ದ ಸದಸ್ಯರುಗಳು:</u>

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಡಾ.ಎಂ.ಎಸ್.ಗಿರಿಧರ್ ರಾವ್ ಜಂಟಿ ನಿರ್ದೇಶಕರು, ಕಾಲೇಜುಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಪ್ರೊ. ಜಿ.ವೆಂಕಟೇಶ್ ಕುಮಾರ್ | ಸದಸ್ಯರು |
| 4. | ಪ್ರೊ.ಎಚ್.ರಾಜಶೇಖರ್ | ಸದಸ್ಯರು |
| 5. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 6. | ಡಾ. ಚೈತ್ರ ನಾರಾಯಣ | ಸದಸ್ಯರು |
| 7. | ಡಾ. ನಿರ್ಮಲ.ಹೆಚ್.ಎಂ | ಸದಸ್ಯರು |
| 8. | ಡಾ.ಹೆಚ್.ಎಸ್.ಗಂಗೇಗೌಡ | ಸದಸ್ಯರು |
| 9. | ಡಾ.ಜಿ.ಗೋವಿಂದರಾಜು | ಸದಸ್ಯರು |
| 10. | ಡಾ.ಜಯ ಶಂಕರ. ಎನ್ | ಸದಸ್ಯರು |
| 11. | ಶ್ರೀ. ಆರ್.ಪ್ರದೀಪ್ ಕುಮಾರ್ ದೀಕ್ಷಿತ್ | ಸದಸ್ಯರು |
| 12. | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 13. | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 14. | ಡಾ. ಈ.ಸಿ.ನಿಂಗರಾಜ್ ಗೌಡ | ಸದಸ್ಯರು |
| 15. | ಡಾ. ಎಂ.ಎಸ್.ದಾಮೋಧರ | ಸದಸ್ಯರು |
| 16. | ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 17. | ಡಾ. ಸಂಗೀತಾ ಗಜಾನನ್ ಭಟ್, ಹಣಕಾಸು ಅಧಿಕಾರಿಗಳು | ಸದಸ್ಯರು |
| 18. | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |

<u>ಹಾಜರಾಗದ ಸದಸ್ಯರು:</u>

1. ಡಾ. ಸೈಯದ್ ಕಾರುು ಮೊಹಿದ್ದೀನ್
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ಮೊದಲಿಗೆ ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿರುವ ಡಾ.ಜಯಶಂಕರ್.ಎನ್, ಪ್ರಾಂಶುಪಾಲರು, ಸಂತ ಜೋಸೆಫರ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಮಂಡ್ಯ ಇವರನ್ನು ಸ್ವಾಗತಿಸಲಾಯಿತು.

ಹಾಗೂ

ಇದುವರೆವಿಗೂ ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿರುವ ಡಾ.ಕೆ.ವಿ.ಸುರೇಶ, ಪ್ರಾಂಶುಪಾಲರು, ಜೆ.ಎಸ್.ಎಸ್. ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| **ದಿನಾಂಕ: 22-08-2022ರಂದು ಜರುಗಿದ "ಆರನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.** | |
| **ದಿನಾಂಕ: 22-08-2022ರಂದು ಜರುಗಿದ "ಆರನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯಲ್ಲಿ ಈ ಕೆಳಕಂಡ ವಿಷಯ ಹಾಗೂ ನಡವಳಿಯನ್ನು ಸೇರ್ಪಡೆಗೊಳಿಸುವುದರೊಂದಿಗೆ ದೃಢೀಕರಿಸಲಾಯಿತು.** | |
| **ಸಾಮಾನ್ಯ ಸಭೆ 2022/6.18** | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಪೂರ್ಣ ಸ್ಥಿರ, ಚರ ಸ್ವತ್ತುಗಳ ರಕ್ಷಣೆ ಸಂಬಂಧ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಂಸ್ಥೆಯನ್ನು ನೇಮಿಸುವ ಬಗ್ಗೆ-ಅನುಸಮರ್ಥನೆಗಾಗಿ. |
| | ಡಾ. ಚೈತ್ರ ನಾರಾಯಣ ಅವರು ಮಾತನಾಡಿ, ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಂಸ್ಥೆಯನ್ನು ವಿಶ್ವವಿದ್ಯಾನಿಲಯವು ಮೊದಲಿನಿಂದಲೂ ಮೆ: ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರಿಗೆ ಕಾರ್ಯಾದೇಶ ನೀಡುತ್ತಿರುವುದು ಕಂಡು ಬಂದಿದೆ. ಈ ಸಂಬಂಧ 15 ದಿನಗಳ ಹಿಂದೆ ಮೆ: ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರ ಟೆಂಡರ್ ರದ್ದುಗೊಳಿಸಬೇಕೆಂದು ಪತ್ರವನ್ನು ಬರೆಯಲಾಗಿತ್ತು. ಸೆಕ್ಯೂರಿಟಿ ಗಾರ್ಡ್‌ಗಳಿಗೆ weekly half ವೇತನ ನೀಡುತ್ತಿದ್ದಾರೆ. ಇದರೊಂದಿಗೆ ತಿಂಗಳ ವೇತನವು ಕಡಿಮೆಯಿರುತ್ತದೆ. ಇದುವರೆವಿಗೂ ವೇತನ ಪರಿಷ್ಕರಿಸಿರುವುದಿಲ್ಲ ಹಾಗೂ ನಿಯಮಾನುಸಾರ ಒದಗಿಸಬೇಕಾದ ಪಿಎಫ್. ಇಎಸ್‌ಐ & ಇತರೆ ಸೌಲಭ್ಯಗಳನ್ನು ನೀಡಿರುವುದಿಲ್ಲ. ಈ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ದಾಖಲೆಗಳನ್ನು ಸಲ್ಲಿಸುತ್ತೇನೆ. ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸೆಕ್ಯೂರಿಟಿ ಗಾರ್ಡ್‌ಗಳ ಸಂಖ್ಯೆ, ಅವರಗಳು ವೇತನ ಮತ್ತು ಇತರೆ ಸೌಲಭ್ಯದ ಬಗ್ಗೆ ಹಾಗೂ ವಿಶ್ವವಿದ್ಯಾನಿಲಯವು ವಿಧಿಸಿರುವ ನಿಬಂಧನೆ ಮತ್ತು ಷರತ್ತುಗಳ ಪೂರ್ಣ ಮಾಹಿತಿ ಸಲ್ಲಿಸಿದ ನಂತರ ಸಭೆಯು ಅನುಸಮರ್ಥಿಸಬೇಕು. ಇಲ್ಲದಿದ್ದರೆ ಈ ಸಭೆಯಲ್ಲಿ ಅನುಸಮರ್ಥಿಸುವುದಕ್ಕೆ ನನ್ನ ಆಕ್ಷೇಪಣೆಯಿರುತ್ತದೆಂದು ತಿಳಿಸಿದರು.<br><br>ಮುಂದುವರೆದು ಮಾತನಾಡಿ, ಯಾವುದೇ ಸಂಸ್ಥೆಯನ್ನು ಟೆಂಡರ್‌ನಲ್ಲಿ ಅಂಗೀಕರಿಸಿ ವಿಶ್ವವಿದ್ಯಾನಿಲಯವು ಕಾರ್ಯಾದೇಶ ನೀಡುವ ಮೊದಲು ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯಬೇಕು. ಇದರ ಬದಲು ಕಾರ್ಯಾದೇಶ ನೀಡಿದ ನಂತರ ಅನುಸಮರ್ಥನೆಗಾಗಿ ವಿಷಯವನ್ನು ಮಂಡಿಸುವುದು ಸೂಕ್ತವಲ್ಲವೆಂದು ತಿಳಿಸಿದರು. ಈ ಪ್ರಸ್ತಾವನೆಯನ್ನು ಶ್ರೀ ಎಂ.ಬಿ. ಗಪ್ಪಣ್ಣ ಅವರು ಬೆಂಬಲಿಸಿದರು.<br><br>ಈ ಸಂಬಂಧ ಮಾನ್ಯ ಕುಲಪತಿಗಳು ಮಾತನಾಡಿ, ಮೆ: ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರಿಗೆ ಮೊದಲಿನಿಂದಲೂ ಟೆಂಡರ್ ಕಾರ್ಯಾದೇಶ ನೀಡಿರುವುದಿಲ್ಲವೆಂದು ಹಾಗೂ ಪ್ರಸ್ತುತವಿರುವ ಭದ್ರತಾ ಸಿಬ್ಬಂದಿಗಳರವರುಗಳನ್ನೇ ಮುಂದುವರೆಸಲಾಗಿದೆ. ಏಜೆನ್ಸಿ ಮಾತ್ರ ಬದಲಾವಣೆಯಾಗಿರುತ್ತದೆಂದು ಸ್ಪಷ್ಟೀಕರಣ ನೀಡುತ್ತಾ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಟ್ಟು 175 ಮಂದಿ ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, 24 ಗಂಟೆಗಳಿಗೆ ತಲಾ 8 ಗಂಟೆಗೆ 60 ಮಂದಿ ಮೂರು ಪಾಳಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಮೆ: ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರಿಗೆ ನೀಡಲಾಗಿರುವ ಕಾರ್ಯಾದೇಶಕ್ಕೆ ಸಭೆಯಲ್ಲಿ ಅನುಸಮರ್ಥನೆ ನೀಡಿ, ವಿಶ್ವವಿದ್ಯಾನಿಲಯವು ವಿಧಿಸಿರುವ ನಿಬಂಧನೆ ಮತ್ತು ಷರತ್ತುಗಳ ಪೂರ್ಣ ಮಾಹಿತಿ ಸಲ್ಲಿಸಲಾಗುವುದು. ಒಂದು ವೇಳೆ ಮೆ: ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರು ವಿಶ್ವವಿದ್ಯಾನಿಲಯವು ವಿಧಿಸಿರುವ ನಿಬಂಧನೆ ಮತ್ತು ಷರತ್ತುಗಳನ್ನು ಪಾಲಿಸದೇ ಇರುವುದು ಕಂಡು ಬಂದಲ್ಲಿ, ಸಿಂಡಿಕೇಟ್ ಸಭೆಯಲ್ಲಿಯೇ ಸದರಿಯವರ ಕಾರ್ಯಾದೇಶವನ್ನು ಹಿಂಪಡೆಯಲು ತೀರ್ಮಾನ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಪೂರ್ಣ ಸ್ಥಿರ, ಚರ ಸ್ವತ್ತುಗಳ ರಕ್ಷಣೆ ಸಂಬಂಧ M/s Sri Ranganatha Enterprises, Mysuru ಭದ್ರತಾ ಸಂಸ್ಥೆಯ ಟೆಂಡರ್‌ನ್ನು ಅಂಗೀಕರಿಸಿ, ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಹೊರಗುತ್ತಿಗೆ ಆಧಾರದ ಮೇಲೆ ವಿಶ್ವವಿದ್ಯಾನಿಲಯ ವಿಧಿಸಿರುವ ನಿಬಂಧನೆ ಮತ್ತು ಷರತ್ತುಗಳನ್ವಯ ಕಾರ್ಯಾದೇಶ ನೀಡಿ ಒಡಂಬಡಿಕೆ ಮಾಡಿಕೊಂಡಿರುವುದನ್ನು ಸಭೆಯು ಅನುಸಮರ್ಥಿಸಿತು. ಈ ಸಂಬಂಧದ ದಾಖಲೆಗಳನ್ನು ಸಿಂಡಿಕೇಟ್ ಸದಸ್ಯರು ಪರಿಶೀಲಿಸಲು ಇಚ್ಛಿಸಿದ್ದಲ್ಲಿ ಒದಗಿಸಲು ತಿಳಿಸಲಾಯಿತು. |

| | |
|---|---|
| **ಸಾಮಾನ್ಯ ಸಭೆ 2022/6.20** | ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎಲ್. ನಂಜುಂಡಸ್ವಾಮಿಯವರನ್ನು ಖಾಯಂಗೊಳಿಸುವ ಬಗ್ಗೆ ಪರಿನಿಯಮಾವಳಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ರಚಿಸಲಾಗಿರುವ ಸಮಿತಿಯ ಸಭೆಯ ವರದಿ. |
| | ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಈ ಹಿಂದೆ ಯುಜಿಸಿ-ಶೈಕ್ಷಣಿಕ ಸಿಬ್ಬಂದಿ ಮಹಾವಿದ್ಯಾಲಯವನ್ನು ಯುಜಿಸಿ, ನವದೆಹಲಿಯು ಯುಜಿಸಿ-ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರವೆಂದು ಮರುನಾಮಕರಣ ಮಾಡಲಾಗಿರುತ್ತದೆ. ವಿಶ್ವವಿದ್ಯಾನಿಲಯವು ಡಾ. ಎಲ್. ನಂಜುಂಡಸ್ವಾಮಿಯವರನ್ನು ಖಾಯಂಗೊಳಿಸುವ ಬಗ್ಗೆ ಪ್ರತ್ಯೇಕ ಪರಿನಿಯಮಾವಳಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸುವ ಬದಲು ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶೈಕ್ಷಣಿಕ ಮತ್ತು ಆಡಳಿತ ಸಿಬ್ಬಂದಿಗಳನ್ನು ಖಾಯಂಗೊಳಿಸುವ ಬಗ್ಗೆ ಪರಿನಿಯಮಾವಳಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಬೇಕು ಹಾಗೂ ಪ್ರಸ್ತುತ ಕೇಂದ್ರವು ಸ್ಥಾಪನೆಯಾದಗಿನಿಂದ ಈವರೆವಿಗೂ ಯುಜಿಸಿ ಅನುದಾನ ಸಂಸ್ಥೆಯಿಂದ ಸದರಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶೈಕ್ಷಣಿಕ ಮತ್ತು ಆಡಳಿತ ಸಿಬ್ಬಂದಿಗಳ ವೇತನ ಹಾಗೂ ಇನ್ನಿತರ ಕಾರ್ಯಕ್ರಮಗಳ ವೆಚ್ಚಗಳಿಗೆ ಅನುದಾನ ಬಿಡುಗಡೆ ಮಾಡುತ್ತಿದೆ. ಆದ್ದರಿಂದ ಯುಜಿಸಿ ಅನುದಾನದಡಿಯಲ್ಲಿ ನಿರ್ವಹಿಸುತ್ತಿರುವ ಮತ್ತೊಂದು ಕೇಂದ್ರವಾದ CSSEIPನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೆ ಅಧಿನಿಯಮವನ್ನು ರಚಿಸಿ ಸರ್ಕಾರಕ್ಕೆ ಕಳುಹಿಸಿರುವಂತೆ ಯುಜಿಸಿ-ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶೈಕ್ಷಣಿಕ ಮತ್ತು ಆಡಳಿತ ಸಿಬ್ಬಂದಿಗಳಿಗೂ ಅನ್ವಯಿಸುವಂತೆ ಪರಿನಿಯಮಾವಳಿಯನ್ನು ರಚಿಸಬೇಕೆಂದು ಸಭೆಯಲ್ಲಿ ಆಗ್ರಹಿಸಿದರು. ಈ ಪ್ರಸ್ತಾವನೆಗೆ ಡಾ. ಈ.ಸಿ. ನಿಂಗರಾಜ್ ಗೌಡ, ಡಾ. ಚೈತ್ರ ನಾರಾಯಣ, ಶ್ರೀ ಎಂ.ಬಿ.ಗಪ್ಪಣ್ಣ, ಶ್ರೀ ಎಸ್.ಡಿ.ದೊಡ್ಡಚಾರಿ ಹಾಗೂ ಡಾ. ಎಂ.ಎಸ್.ದಾಮೋದರ ಅವರುಗಳು ಬೆಂಬಲ ಸೂಚಿಸುತ್ತಾ, ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೂ ಯುಜಿಸಿಯವರು ಅನುದಾನ ಬಿಡುಗಡೆಗೊಳಿಸುತ್ತಿರುವುದರಿಂದ ಎಲ್ಲಾ ಸಿಬ್ಬಂದಿಗಳಿಗೂ ಅನ್ವಯಿಸುವಂತೆ ಪರಿನಿಯಮಾವಳಿಯನ್ನು ರಚಿಸಿ ನಿಯತಗೊಳಿಸಬಹುದೆಂದು ತಿಳಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ, ಪ್ರಸ್ತುತ ಡಾ.ಎಲ್. ನಂಜುಂಡಸ್ವಾಮಿಯವರನ್ನು ಖಾಯಂಗೊಳಿಸುವ ಬಗ್ಗೆ ಸಿದ್ಧಪಡಿಸಿರುವ ಪ್ರತ್ಯೇಕ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸುವುದು. ಹಾಗೆಯೇ, ಯುಜಿಸಿ-ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಸಿಬ್ಬಂದಿಯವರುಗಳಿಗೂ ಪ್ರತ್ಯೇಕ ಪರಿನಿಯಮಾವಳಿಯನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗುವುದೆಂದು ಸಭೆಯಲ್ಲಿ ತೀರ್ಮಾನಿಸಿದರು. ಇದಕ್ಕೆ ಸಭೆಯು ಒಪ್ಪಿಗೆಯನ್ನು ಸೂಚಿಸಿತು. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ವತಿಯಿಂದ ರಚಿಸಿರುವ ಸಮಿತಿಯ ವರದಿಯನ್ವಯ, ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎಲ್. ನಂಜುಂಡಸ್ವಾಮಿಯವರನ್ನು ಖಾಯಂಗೊಳಿಸುವ ಬಗ್ಗೆ ಸಿದ್ಧಪಡಿಸಿರುವ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಕಳುಹಿಸಲು ಸಭೆಯಲ್ಲಿ ಶಿಫಾರಸ್ಸು ಮಾಡಲಾಯಿತು. |
| **ಸಾಮಾನ್ಯ ಸಭೆ 2022/ಇತರೆ ವಿಷಯಗಳು** | **ಮೈಸೂರು ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರುಗಳು ವಾರಕ್ಕೆ 15 ಗಂಟೆಗಳ ಬೋಧನಾ ಕಾರ್ಯಭಾರವನ್ನು ಹೊಂದಿರುವ ಬಗ್ಗೆ.** |

ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್ ಅವರು ಮಾತನಾಡಿ, ಸರ್ಕಾರಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳು ವಾರಕ್ಕೆ 15 ಗಂಟೆಗಳ ಬೋಧನಾ ಕಾರ್ಯಭಾರವನ್ನು ಹೊಂದಿರುವವರು ಇತರೆ ಕಾಲೇಜು/ಸಂಸ್ಥೆಗಳಲ್ಲಿಯೂ ಕಾರ್ಯ ನಿರ್ವಹಿಸುತ್ತಿರುವುದು ಕಂಡು ಬಂದಿದೆ. 15 ಗಂಟೆ ಬೋಧನಾ ಕಾರ್ಯಭಾರವನ್ನು ಹೊಂದಿದ್ದರೂ, ಹೆಚ್ಚುವರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳನ್ನು ಗುರುತಿಸುವ ಮೂಲಕ ವಿಶ್ವವಿದ್ಯಾನಿಲಯದಿಂದ ಬಿಡುಗಡೆ ಮಾಡಬೇಕೆಂದು ತಿಳಿಸಿದರು.

ಡಾ. ಚೈತ್ರ ನಾರಾಯಣ ಅವರು ಮಾತನಾಡಿ, ಎಲ್ಲಾ ಅತಿಥಿ ಉಪನ್ಯಾಸಕರುಗಳನ್ನು ಸಂದರ್ಶನ ಮುಖಾಂತರ ನೇಮಕಾತಿ ಮಾಡುವುದು ಸೂಕ್ತ. ಇದರಿಂದ ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಬಹುದೆಂದು ಸಲಹೆ ನೀಡಿದರು. ಡಾ. ಎಂ.ಎಸ್.ದಾಮೋದರ ಅವರು ಮಾತನಾಡಿ, ಪಿಹೆಚ್.ಡಿ ಪದವಿ/ನೆಟ್/ಕೆ-ಸೆಟ್ ತೇರ್ಗಡೆ ಹೊಂದಿದವರಿಗೆ

| | |
|---|---|
| ಪ್ರಥಮ ಆದ್ಯತೆ ನೀಡಬೇಕೆಂದು ಹಾಗೂ 2-3 ಅಭ್ಯರ್ಥಿಗಳಿಗೆ 4 ಗಂಟೆಗಳ ಬೋಧನಾ ಕಾರ್ಯ ಹಂಚಿಕೆ ಮಾಡುವ ಬದಲು ಒಬ್ಬರಿಗೆ 15 ಗಂಟೆಗಳ ಬೋಧನಾ ಕಾರ್ಯಭಾರವನ್ನು ಹಂಚಿಕೆ ಮಾಡಿ, ಒಬ್ಬರನ್ನು ಅತಿಥಿ ಉಪನ್ಯಾಸಕರನ್ನಾಗಿ ನೇಮಕ ಮಾಡುವುದರಿಂದ ಜೀವನ ರೂಪಿಸಿದಂತಾಗುತ್ತದೆಂದು ಹೇಳಿದರು.<br><br>ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಎಲ್ಲಾ ಕಾಲೇಜು/ ವಿಭಾಗ/ ಸಂಸ್ಥೆಯಿಂದ ಅವಶ್ಯಕತೆಗನುಗುಣವಾಗಿ ಬೋಧನಾ ಕಾರ್ಯಭಾರ ಗಳ ಹಾಗೂ ಖಾಲಿ ಇರುವ ಹುದ್ದೆಗಳ Ratio ವಿವರವನ್ನು ಪಡೆದುಕೊಂಡು, ತದನಂತರ ಅವಶ್ಯಕತೆಗನುಗುಣವಾಗಿ Ratio ಆಧಾರದ ಮೇಲೆ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳುವುದು ಹಾಗೂ ಸರ್ಕಾರದವರು ಖಾಯಂ ಬೋಧಕರ ನೇಮಕಾತಿಗೆ ರೆಗ್ಯುಲೇಷನ್ ಮಾಡಿರುತ್ತದೆ. ಹಾಗೆಯೇ, ವಿಶ್ವವಿದ್ಯಾನಿಲಯವು ಅತಿಥಿ ಉಪನ್ಯಾಸಕರುಗಳ ನೇಮಕಾತಿಗೆ ಸಂಬಂಧಿಸಿದಂತೆ ರೆಗ್ಯುಲೇಷನ್ ಸಿದ್ಧಪಡಿಸುವುದು ಸೂಕ್ತವೆಂದರು.<br><br>ಈ ಸಂಬಂಧ ಮಾನ್ಯ ಕುಲಪತಿಯವರು ಮಾತನಾಡಿ, ಸರ್ಕಾರಿ ಕಾಲೇಜುಗಳಲ್ಲಿ ವಾರಕ್ಕೆ 15 ಗಂಟೆಗಳ ಬೋಧನಾ ಕಾರ್ಯಭಾರವನ್ನು ಹೊಂದಿರುವ ಅತಿಥಿ ಉಪನ್ಯಾಸಕರುಗಳು ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು/ವಿಭಾಗ/ಸಂಸ್ಥೆಗಳಲ್ಲಿಯೂ ಕಾರ್ಯ ನಿರ್ವಹಿಸುತ್ತಿರುವವರಿಗೆ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಈ ರೀತಿ ಎರಡು ಕಡೆ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಈಗಾಗಲೇ ವಿಶ್ವವಿದ್ಯಾನಿಲಯದ ವತಿಯಿಂದ ನೋಟಿಸ್ ಜಾರಿಗೊಳಿಸಲಾಗಿದೆ. ಪ್ರಸಕ್ತ ಶೈಕ್ಷಣಿಕ ಅವಧಿ ಪೂರ್ಣಗೊಂಡ ನಂತರ ಎಲ್ಲಾ ಅತಿಥಿ ಉಪನ್ಯಾಸಕರುಗಳಿಗೆ ಸಂದರ್ಶನ ಮೂಲಕ ನೇಮಕ ಮಾಡಿಕೊಳ್ಳಲಾಗುವುದು. ಇದರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪಿಹೆಚ್.ಡಿ ಪದವಿ/ನೆಟ್/ಕೆ-ಸೆಟ್ ತೇರ್ಗಡೆ ಹೊಂದಿರುವವರಿಗೆ ಪ್ರಥಮ ಆದ್ಯತೆ ನೀಡಲಾಗುವುದೆಂದು ಪ್ರಸ್ತಾಪಿಸಿದರು. | |
| **ಕ್ರಮ ಸಂಖ್ಯೆ: 6.27 ರ ವಿಷಯಕ್ಕೆ ಸಂಬಂಧಿಸಿದಂತೆ** ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್ ಅವರು ಮಾತನಾಡಿ, ಕೋರ್ಟ್‌ನಲ್ಲಿ ದಾವೆ ಹೂಡಿರುವವರಿಗೆ ವೇತನ ಪರಿಷ್ಕರಿಸುವ ಬಗ್ಗೆ ಏನಾದರೂ ಸ್ಪಷ್ಟ ನಿರ್ದೇಶನವಿದೆಯೇ? ಅವರಿಗೂ ಪರಿಷ್ಕೃತ ವೇತನ ಜಾರಿಗೊಳಿಸಿ ಸರ್ಕಾರಕ್ಕು ಪತ್ರ ಬರೆದು ಸೂಕ್ತ ಕ್ರಮವಹಿಸಬೇಕೆಂದು ತಿಳಿಸಿದರು. | |
| **ಇತರೆ ವಿಷಯದ ಕ್ರಮ ಸಂಖ್ಯೆ: 4ರ ಬಗ್ಗೆ.**<br>ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್ ಅವರು ಮಾತನಾಡಿ, ಇದರ ಪ್ರಸ್ತಾಪ ಮಾಡಿದ್ದು ನಾನು. ನನ್ನ ಹೆಸರು ಇಲ್ಲ. ಸ್ನಾತಕೋತ್ತರ ಕೇಂದ್ರ ಹಾಗೂ ಬೇರೆ ವಿಭಾಗಗಳಿಂದ ಜೇಷ್ಠತೆಯ ಆಧಾರದ ಮೇಲೆ ಮೈಸೂರಿನಲ್ಲಿ ಆಡಳಿತಾತ್ಮಕ ಹುದ್ದೆಗಳನ್ನು/ಜವಾಬ್ದಾರಿಗಳನ್ನು ಹೊಂದಿದ್ದು, ತಮ್ಮ ಮೂಲಸ್ಥಾನಗಳಲ್ಲಿ ಪಾಠ ಪ್ರವಚನಗಳು ಮಾಡದೆ ಮಾನಸಗಂಗೋತ್ರಿಯಲ್ಲಿ ಬೋಧನಾ ಅವಧಿಗೆ ಬೇಡಿಕೆ ಇಡುತ್ತಿದ್ದು ಹಲವರಿಗೆ ಅವಕಾಶ ಕಲ್ಪಿಸಿರುವುದು ಗಮನಕ್ಕೆ ಬಂದಿದೆ. ಆ ರೀತಿ ನೀಡಿದಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ತೊಂದರೆ ಆಗುತ್ತಿದೆ. ಆಡಳಿತಾತ್ಮಕ ಹುದ್ದೆ ಹೊಂದಿದ್ದರೂ ತಮ್ಮ ಮಾತೃ ಸಂಸ್ಥೆಯಲ್ಲೇ ಬೋಧನೆಗೆ ಅವಕಾಶ ಕಲ್ಪಿಸಲು ಕ್ರಮಕ್ಕೈಗೊಳ್ಳಲಿ ಇಲ್ಲ ಬೇರೆಡೆ ಕಾರ್ಯನಿರ್ವಹಿಸುವ ಉತ್ಸುಕತೆ ಇದ್ದರೆ ಅಂತಹವರನ್ನು ಚಾಮರಾಜನಗರಕ್ಕೆ ಕಳುಹಿಸಿ ಎಂದು ಮನವಿ ಮಾಡಿದೆ. ಇದನ್ನು ನಡವಳಿಯಲ್ಲಿ ಸೇರಿಸಲು ಕೋರಿದರು. | |
| **ಸಾಮಾನ್ಯ ಸಭೆ**<br>**2022/7.1** | ಮರಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್, ಬೆಳವಾಡಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ, ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೆಚ್ಚುವರಿಯಾಗಿ 03 ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಪರೀವಿಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of certain Institutions for specified studies/specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ಮರಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ರೊಫಷನಲ್ ಸ್ಟಡೀಸ್, ಬೆಳವಾಡಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ, ಇವರ ಸಂಸ್ಥೆಯಲ್ಲಿ Specialized Programmeಅಡಿಯಲ್ಲಿ ಹೊಸದಾಗಿ 1. B.Sc. Hons. (Artificial Intelligence and Machine Learning) 2. BBA-Hons. (Hospital Administration) 3. Master of Hospital Administration ಕೋರ್ಸ್‌ಗಳನ್ನು ಪ್ರತಿ ಕೋರ್ಸಿಗೆ 40 ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ 2022-23ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| **ಸಾಮಾನ್ಯ ಸಭೆ 2022/7.2** | ಏಷ್ಯಾ ಪೆಸಿಫಿಕ್ ಇನ್ಸಟಿಟ್ಯೂಟ್ ಆಫ್ ಎಂಬ್ರಿಯಾಲಜಿ, ಮೈಸೂರು ಇವರು Specialized Programme ಅಡಿಯಲ್ಲಿ ನಡೆಸುತ್ತಿರುವ M.Sc. (Clinical Embryology & Pre-implantation Genetics) ಕೋರ್ಸ್‌ಗೆ ಹೆಚ್ಚುವರಿಯಾಗಿ ೨೦ ಪ್ರವೇಶಾತಿಗಳಿಗೆ ಅನುಮತಿ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಪರೀವಿಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of certain Institutions for specified studies/specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ಏಷ್ಯಾ ಪೆಸಿಫಿಕ್ ಇನ್ಸಟಿಟ್ಯೂಟ್ ಆಫ್ ಎಂಬ್ರಿಯಾಲಜಿ, ಮೈಸೂರು ಇವರು Specialized Programme ಅಡಿಯಲ್ಲಿ ನಡೆಸುತ್ತಿರುವ M.Sc. (Clinical Embryology & Pre-implantation Genetics) ಕೋರ್ಸ್‌ಗೆ ಹೆಚ್ಚುವರಿಯಾಗಿ ೨೦ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯಾಮಿತಿಗೆ ೨೦೨೨-೨೩ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.3** | ವಿಶ್ವವಿದ್ಯಾನಿಲಯದ Specialized Programmeನಡಿ ವಿವಿಧ ಕೋರ್ಸ್‌ಗಳನ್ನು ನಡೆಸಲು ಮಾನ್ಯತೆ ಪಡೆದಿರುವ Acharya Institute for Innovation and Transformation, ಬೆಳವಾಡಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ, ಇವರು ವಿಳಾಸ ಬದಲಾವಣೆ ಕೋರಿದ್ದ ಸಂಬಂಧ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯ ಬಗ್ಗೆ. |
| ತೀರ್ಮಾನ | ಪರೀವಿಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ವಿಶ್ವವಿದ್ಯಾನಿಲಯದ Specialized Programmeನಡಿ ವಿವಿಧ ಕೋರ್ಸ್‌ಗಳನ್ನು ನಡೆಸಲು ಮಾನ್ಯತೆ ಪಡೆದಿರುವ Acharya Institute for Innovation and Transformation, ಬೆಳವಾಡಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ ಇಲ್ಲಿಂದ Acharya Institute for Innovation and Transformation (AIIT), 'B' Block, 18$^{th}$Main Road, Vijayanagar 3$^{rd}$ stage, KSOU Academic Block, Mysuru ಇಲ್ಲಿಗೆ ಬದಲಾವಣೆ ಮಾಡಲು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.4** | ಕ್ರೆಸ್ಟ ಪ್ರಥಮ ದರ್ಜೆ ಕಾಲೇಜು, ಬನ್ನೂರು ರಸ್ತೆ, ಆಲನಹಳ್ಳಿ, ಮೈಸೂರು ಇವರು ಪಿಹೆಚ್.ಡಿ. ಸಂಶೋಧನೆ ನಡೆಸಲು ಕೋರಿರುವ ಹೆಚ್ಚುವರಿ ವಿಷಯಗಳ ಸಂಬಂಧ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಪರೀವಿಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of certain Institutions for specified studies/specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ಕ್ರೆಸ್ಟ ಪ್ರಥಮ ದರ್ಜೆ ಕಾಲೇಜು, ಬನ್ನೂರು ರಸ್ತೆ, ಆಲನಹಳ್ಳಿ, ಮೈಸೂರು ಇವರು ಹೆಚ್ಚುವರಿಯಾಗಿ Commerce ಮತ್ತು Computer Science ವಿಷಯಗಳಿಗೆ ಸಂಶೋಧನಾ ಕಾರ್ಯ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.5** | ದಕ್ಷಾ ರೀಸರ್ಚ್ ಸೆಂಟರ್, ಬೆಳವಾಡಿ, ಪೆಟ್ರೋಲ್ ಬಂಕ್ ಹತ್ತಿರ, ಹೂಟಗಳ್ಳಿ, ಮೈಸೂರು ಇವರಿಗೆ ಹೊಸದಾಗಿ Commerce ಮತ್ತು Management ವಿಷಯಗಳಲ್ಲಿ ಹೊಸದಾಗಿ ಸಂಶೋಧನಾ ಕಾರ್ಯಕೈಗೊಳ್ಳಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಿರುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | ಪರೀವಿಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of certain Institutions for specified studies/specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ದಕ್ಷಾ ರೀಸರ್ಚ್ ಸೆಂಟರ್, ಬೆಳವಾಡಿ, ಪೆಟ್ರೋಲ್ ಬಂಕ್ ಹತ್ತಿರ, ಹೂಟಗಳ್ಳಿ, ಮೈಸೂರು ಇವರಿಗೆ ೨೦೨೨-೨೦೨೩ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ Commerce ಮತ್ತು Management ವಿಷಯಗಳಲ್ಲಿ ಸಂಶೋಧನಾ ಕಾರ್ಯ ಕೈಗೊಳ್ಳಲು ಮಾನ್ಯತೆ ನೀಡಿರುವುದನ್ನು ಸಭೆಯು ಅನುಸಮರ್ಥಿಸಿತು. |

| | |
|---|---|
| **ಸಾಮಾನ್ಯ ಸಭೆ 2022/7.6** | ನಿರ್ದೇಶಕರು, ನಿಟ್ಟೆ ರೀಸರ್ಚ್ ಅಂಡ್ ಎಜುಕೇಷನ್ ಅಕಾಡೆಮಿ, ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕ್ಯಾಂಪಸ್, ಯಲಹಂಕ, ಬೆಂಗಳೂರು ಇವರು ಹೆಚ್ಚುವರಿ ವಿಷಯಗಳಲ್ಲಿ ಪಿಹೆಚ್.ಡಿ. ಸಂಶೋಧನೆ ಕಾರ್ಯ ಕೈಗೊಳ್ಳಲು ಮಾನ್ಯತೆ ನೀಡುವಂತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಪರೀವಿಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of certain Institutions for specified studies/specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ನಿಟ್ಟೆ ರೀಸರ್ಚ್ ಅಂಡ್ ಎಜುಕೇಷನ್ ಅಕಾಡೆಮಿ, ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕ್ಯಾಂಪಸ್, ಯಲಹಂಕ, ಬೆಂಗಳೂರು ಇವರಿಗೆ 2022-2023 ಶೈಕ್ಷಣಿಕ ಸಾಲಿನಲ್ಲಿ Materials Science, Physics, Chemistry and Environmental Science ವಿಷಯಗಳಲ್ಲಿ ಹೆಚ್ಚುವರಿಯಾಗಿ ಸಂಶೋಧನಾ ಕಾರ್ಯ ಕೈಗೊಳ್ಳಲು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.7** | ಕೆರಿಯರ್ ಹಬ್, ಮಾನಸಗಂಗೋತ್ರಿ, ಮೈಸೂರು ಮತ್ತು Clicks Campus, Bhattarahalli, Bengaluru ಇವುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| ತೀರ್ಮಾನ | ಕೆರಿಯರ್ ಹಬ್, ಮಾನಸಗಂಗೋತ್ರಿ, ಮೈಸೂರು ಮತ್ತು Clicks Campus, Bhattarahalli, Bengaluruಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕರಡು ಒಡಂಬಡಿಕೆಯ ಸಾಧಕ-ಬಾಧಕಗಳ ಸಂಬಂಧ ಕಾನೂನು ಸಲಹೆಗಾರರ ಅಭಿಪ್ರಾಯವು ಈ ರೀತಿಯಾಗಿರುತ್ತದೆ:<br><br>"It is noted that the clicks Campus, bhattarahalli, Bengaluru and the University of Mysore are intending to enter into a Memorandum of Understanding in respect to set of mutual Cooperation for the specified areas and identified field which has been more specifically mentioned in the MOU. With respect to the objectives and the legality of the MOU, the same seems sufficient and University may execute the same".<br><br>ಈ ಸಂಬಂಧ Clicks Campus, Bhattarahalli, Bengaluru ಸಂಸ್ಥೆಯೊಡನೆ ವಿಶ್ವವಿದ್ಯಾನಿಲಯವು ಕೆರಿಯರ್ ಹಬ್, ಮಾನಸಗಂಗೋತ್ರಿ, ಮೈಸೂರು ಇವರುಗಳು "Strengthening the Employability skills and placement opportunities for the students" ಉದ್ದೇಶಕ್ಕಾಗಿ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.8** | Malabar Institute of Optometry, (A Unit of MEH Health Care (P) Ltd.,), ಸಂಸ್ಥೆಯ ನಾಮಾಂಕಿತವನ್ನು Noor Malabar Institute of Optometry and Management (A Unit of Noor Malabar Health Care LLP) ಎಂದು ಬದಲಾವಣೆ ಮಾಡುವಂತೆ ಕೋರಿರುವ ಬಗ್ಗೆ. |
| **ತೀರ್ಮಾನ** | Malabar Institute of Optometry, (A Unit of MEH Health Care (P) Ltd.,), ಇವರು 2019-20ನೇ ಸಾಲಿನಿಂದ Specialized Programme ಅಡಿಯಲ್ಲಿ B.Sc (Optometry) ಕೋರ್ಸ್‌ನ ಮಾನ್ಯತೆ ಪಡೆದು ಸಂಸ್ಥೆಯನ್ನು ನಡೆಸುತ್ತಿರುತ್ತಾರೆ. ಸಂಸ್ಥೆಯ ಆಡಳಿತ ಮಂಡಳಿಯ ತೀರ್ಮಾನದನುಸಾರ ಸದರಿ ಸಂಸ್ಥೆಯ ನಾಮಾಂಕಿತವನ್ನು Noor Malabar Institute of Optometry and Management (A Unit of Noor Malabar Health Care LLP) ಎಂದು ಬದಲಾವಣೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| **ಸಾಮಾನ್ಯ ಸಭೆ 2022/7.9** | ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ ಅಂಡ್ ರಿಸರ್ಚ್ ಸೆಂಟರ್, ಮೈಸೂರು ಇವರು Specialized Programmeಅಡಿಯಲ್ಲಿ ನಡೆಸುತ್ತಿರುವ M.Sc. (Assisted Reproduction and Embryology) ಕೋರ್ಸ್‌ಗೆ ಹೆಚ್ಚುವರಿಯಾಗಿ 40 ಪ್ರವೇಶಾತಿಗಳಿಗೆ ಅನುಮತಿ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | ಪರೀವಿಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of certain Institutions for specified studies/specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ ಅಂಡ್ ರಿಸರ್ಚ್ ಸೆಂಟರ್, ಮೈಸೂರು, ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಮಾನ್ಯತೆ ಪಡೆದು ನಡೆಸುತ್ತಿರುವ M.Sc. (Assisted Reproduction and Embryology) ಕೋರ್ಸಿಗೆ 2022-23ನೇ ಶೈಕ್ಷಣಿಕ ಸಾಲಿನಿಂದ ಹೆಚ್ಚುವರಿಯಾಗಿ 40 ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ ಪ್ರಾರಂಭಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.10** | ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿಯ ಸ್ಥಾಪನೆಯ ಸಂಬಂಧ ಕರಡು ಅಧಿನಿಯಮಕ್ಕೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | ಮುಂದೂಡಲಾಯಿತು |
| **ಸಾಮಾನ್ಯ ಸಭೆ 2022/7.11** | ಭಾರತೀ ಕಾಲೇಜು, ಭಾರತೀನಗರ, ಮದ್ದೂರು ತಾ., ಮಂಡ್ಯ ಜಿಲ್ಲೆ ಇವರುSpecialized Programme ಅಡಿಯಲ್ಲಿ ಹೊಸದಾಗಿB.Sc. (Hons.) (Artificial Intelligence and Cloud Computing) ಕೋರ್ಸನ್ನು ಪ್ರಾರಂಭಿಸಲು ಅನುಮತಿ ನೀಡಿರುವ ಸಂಬಂಧ ಅನುಮೋದನೆಯನ್ನು ಕೋರುವ ಬಗ್ಗೆ. |
| **ತೀರ್ಮಾನ** | ಪರೀವಿಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of certain Institutions for specified studies/specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ಭಾರತೀ ಕಾಲೇಜು, ಭಾರತೀನಗರ, ಮದ್ದೂರು ತಾ., ಮಂಡ್ಯ ಜಿಲ್ಲೆ ಇವರು Specialized Programme ಅಡಿಯಲ್ಲಿ ಹೊಸದಾಗಿ B.Sc. (Hons.) (Artificial Intelligence and Cloud Computing) ಕೋರ್ಸನ್ನು 2022-23ನೇ ಶೈಕ್ಷಣಿಕ ಸಾಲಿನಿಂದ 40 ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ ಪ್ರಾರಂಭಿಸಲು ಸಿಂಡಿಕೇಟ್ ಸಭೆಯು ಅನು~~ಮೋದಿಸಿತು.~~ ಸಮರ್ಥಿಸಿತು |
| **ಸಾಮಾನ್ಯ ಸಭೆ 2022/7.12** | ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ಮತ್ತು Gigger Technologies Private Limited, Bangalore ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| **ತೀರ್ಮಾನ** | ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ಮತ್ತು Gigger Technologies Private Limited, Bangalore ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕರಡು ಒಡಂಬಡಿಕೆಯ ಸಾಧಕ-ಬಾಧಕಗಳ ಸಂಬಂಧ ಕಾನೂನು ಸಲಹೆಗಾರರ ಅಭಿಪ್ರಾಯವು ಈ ರೀತಿಯಾಗಿರುತ್ತದೆ:<br>"It is opined that objectives and the legality of the MOU seems sufficient and University may execute the same".<br>ಈ ಸಂಬಂಧ Gigger Technologies Private Limited, Bangalore ಸಂಸ್ಥೆಯೊಡನೆ ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ಇವರು "ವಿಶ್ವವಿದ್ಯಾನಿಲಯ ಪ್ರತಿನಿಧಿಸುವ ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಅಂತರ ವಿಶ್ವವಿದ್ಯಾನಿಲಯ ಪಂದ್ಯಾವಳಿಗಳಲ್ಲಿ ಭಾಗವಹಿಸಲು ಆಯ್ಕೆಯಾಗುವ ಕ್ರೀಡಾ ವಿದ್ಯಾರ್ಥಿಗಳ ಉನ್ನತ ಮಟ್ಟದ ಕ್ರೀಡಾ ಕೌಶಲ್ಯ ಮತ್ತು Sports performance ಹೆಚ್ಚಿಸಲು ಅಗತ್ಯವಿರುವ ವಿವಿಧ ಮಾರ್ಗಗಳ ಬಗ್ಗೆ ವಿದ್ಯಾರ್ಥಿಗಳಿಂದ ಮಾಹಿತಿಯನ್ನು ಪಡೆದು, ಕ್ರೀಡಾ ವಿದ್ಯಾರ್ಥಿಗಳ ಕ್ರೀಡಾ ಪ್ರದರ್ಶನದ ಮಟ್ಟವನ್ನು ಹೆಚ್ಚಿಸುವ" ಉದ್ದೇಶಕ್ಕಾಗಿ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| **ಸಾಮಾನ್ಯ ಸಭೆ 2022/7.13** | ಗಣಕ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಪ್ರೊ.ಡಿ.ಎಸ್.ಗುರು, ಪ್ರಾಧ್ಯಾಪಕರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 23-11-2020ರಿಂದ ಜಾರಿಗೆ ಬಂದಂತೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ 22-11-2022ಕ್ಕೆ ಮುಕ್ತಾಯಗೊಳ್ಳುತ್ತಿದೆ ಹಾಗೂ ಗಣಕ ವಿಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ ಪ್ರೊ.ನಾಗೇಂದ್ರ ಸ್ವಾಮಿ ಹೆಚ್.ಎಸ್. ಅವರು ಹಿರಿಯರಾಗಿರುತ್ತಾರೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಪ್ರೊ.ನಾಗೇಂದ್ರ ಸ್ವಾಮಿ ಹೆಚ್.ಎಸ್. ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 23-11-2022 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಗಣಕ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/7.14** | ಮನಃಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಪ್ರೊ. ಜಿ.ವೆಂಕಟೇಶ್‌ಕುಮಾರ್, ಪ್ರಾಧ್ಯಾಪಕರು, ಮನಃಶಾಸ್ತ್ರ ಅಧ್ಯಯನ ವಿಭಾಗ, ಮಾಗಂ, ಮೈಸೂರು ಇವರನ್ನು ದಿನಾಂಕ 01-01-2021ರಿಂದ ಜಾರಿಗೆ ಬಂದಂತೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ 31-12-2022ಕ್ಕೆ ಮುಕ್ತಾಯಗೊಳ್ಳುತ್ತಿದೆ ಹಾಗೂ ಮನಃಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ ಪ್ರೊ. ಜಿ.ಸಂಪತ್ ಕುಮಾರ್ ಅವರು ಹಿರಿಯರಾಗಿರುತ್ತಾರೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಪ್ರೊ. ಸಂಪತ್ ಕುಮಾರ್, ಮನಃಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ 01-01-2023 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಮನಃಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/7.15** | Geographical Information System (GIS) (PG) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಬಗ್ಗೆ- ಅನುಸಮರ್ಥನೆಗಾಗಿ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000, 33(1) ಮತ್ತು (2)ರನ್ವಯ Geographical Information System (GIS) (PG) ಅಧ್ಯಯನ ಮಂಡಳಿಯನ್ನು ಮೂರು ವರ್ಷಗಳ ಅವಧಿಗೆ ಪುನರ್ ರಚಿಸಿ ಅಧಿಸೂಚನೆಯನ್ನು ಹೊರಡಿಸಿರುವುದನ್ನು ಸಭೆಯು ಗಮನಿಸಿ ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/7.16** | ವಿಶ್ವವಿದ್ಯಾನಿಲಯದ 2021-22ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಹಾಗೂ ಅನುಮೋದನೆ ಬಗೆಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ 2021-22ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸಿದ ಸಭೆಯು ಸರ್ಕಾರಕ್ಕೆ ಕಳುಹಿಸಲು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.17** | ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರದಲ್ಲಿ (CIST) ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕ ಮತ್ತು ಅಧ್ಯಾಪಕೇತರರ ತಾತ್ಕಾಲಿಕ ಉದ್ಯೋಗಿಗಳಿಗೆ ವಿಶ್ವವಿದ್ಯಾನಿಲಯದಿಂದಲೇ ವೇತನವನ್ನು ಭರಿಸುವ ಬಗ್ಗೆ. |
| | ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರದಲ್ಲಿ (CIST) ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕ ಮತ್ತು ಅಧ್ಯಾಪಕೇತರರ ತಾತ್ಕಾಲಿಕ ಉದ್ಯೋಗಿಗಳಿಗೆ ಇದುವರೆಗೂ ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರದ ಸ್ವಯಂ ಆರ್ಥಿಕ ಅನುದಾನದಿಂದ ವೇತನವನ್ನು ಭರಿಸುತ್ತಿದ್ದು, ಪ್ರಸ್ತುತ ಕೇಂದ್ರದಲ್ಲಿ ಸದರಿಯವರುಗಳಿಗೆ ವೇತನ ವೆಚ್ಚ ಭರಿಸಲು |

| | |
|---|---|
| | ಸಾಧ್ಯವಾಗುತ್ತಿಲ್ಲದ ಕಾರಣ ಇವರುಗಳಿಗೆ ವಿಶ್ವವಿದ್ಯಾನಿಲಯದ ಸಾಮಾನ್ಯ ರೆವಿನ್ಯೂ ಖಾತೆ (GRA)ಯಿಂದಲೇ ಭರಿಸಿಕೊಡಬೇಕೆಂದು ಕೋರಿರುತ್ತಾರೆ. |
| **ತೀರ್ಮಾನ** | ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರದ ಸ್ವಯಂ ಆರ್ಥಿಕ ಅನುದಾನವನ್ನು ಆಧರಿಸಿ ಅದರ ಅನುಗುಣವಾಗಿ ವಿಶ್ವವಿದ್ಯಾನಿಲಯವು ವಿಧಿಸುವ ಷರತ್ತುಗಳೊಂದಿಗೆ ವಿಶ್ವವಿದ್ಯಾನಿಲಯದ ಸಾಮಾನ್ಯ ರೆವಿನ್ಯೂ ಖಾತೆ (GRA) ಗೆ ಪಾವತಿ ಮಾಡಿದ್ದಲ್ಲಿ ಮಾತ್ರ ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರದಲ್ಲಿ (CIST) ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕ ಮತ್ತು ಅಧ್ಯಾಪಕೇತರರ ತಾತ್ಕಾಲಿಕ ಉದ್ಯೋಗಿಗಳಿಗೆ ವಿಶ್ವವಿದ್ಯಾನಿಲಯದ ಸಾಮಾನ್ಯ ರೆವಿನ್ಯೂ ಖಾತೆಯಿಂದ (GRA) ವೇತನವನ್ನು ಭರಿಸಲು ಸಭೆಯು ಒಪ್ಪಿಗೆ ನೀಡಿತು. |
| **ಸಾಮಾನ್ಯ ಸಭೆ 2022/7.18** | ದಿವಂಗತ ಮಹದೇವ ನಾಯಕ, ತೋಟಗಾರ, ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಗನಾದ ಶ್ರೀ ಚಂದ್ರಕುಮಾರ್ ಎಂ., ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ದಿವಂಗತ ಮಹದೇವ ನಾಯಕ, ತೋಟಗಾರ, ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸೇವೆಯಲ್ಲಿರುವಾಗಲೇ ನಿಧನ ಹೊಂದಿರುತ್ತಾರೆ. ಇವರ ಮಗನಾದ ಶ್ರೀ. ಚಂದ್ರಕುಮಾರ್ ಎಂ ಅವರು ಎಸ್.ಎಸ್.ಎಲ್.ಸಿ ತೇರ್ಗಡೆಯಾಗಿದ್ದು, ಅನುಕಂಪ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ಶ್ರೀ. ಚಂದ್ರಕುಮಾರ್ ಎಂ ಅವರಿಗೆ ಅನುಕಂಪದ ಆಧಾರದ ಮೇಲೆ ಪರಿಚಾರಕರ ಹುದ್ದೆಗೆ ನೇಮಕ ಮಾಡಲು ಸಿಂಡಿಕೇಟ್ ಸಭೆ ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.19** | 2023ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋಮಾನ ತಲುಪುವ ನೌಕರರಿಗೆ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯ ವಿವಿಧ ವಿಭಾಗ/ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು/ಅಧ್ಯಾಪಕೇತರು ಹಾಗೂ ತಾಂತ್ರಿಕ ವರ್ಗದ ಉದ್ಯೋಗಿಗಳು 2023ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋಮಾನ ತಲುಪುವ ನೌಕರರಿಗೆ ನಿವೃತ್ತಿ ಹೊಂದಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.20** | 2022-23ನೇ ಶೈಕ್ಷಣಿಕ ಸಾಲಿಗೆ ಎಲ್ಲಾ ಸ್ನಾತಕೋತ್ತರ ಕೋರ್ಸ್‌ಗಳು ಹಾಗೂ ಹೊಸದಾಗಿ ಪ್ರಾರಂಭವಾದ ಕೋರ್ಸ್‌ಗಳಿಗೆ ಸೀಟುಗಳ ಸಂಖ್ಯೆಯನ್ನು ನಿಗಧಿಪಡಿಸಿರುವ ಬಗ್ಗೆ. |
| **ತೀರ್ಮಾನ** | ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-1), ಬೆಂಗಳೂರು ಇವರ ಆದೇಶದನ್ವಯ ಸಂಖ್ಯಾಮಿತಿಯನ್ನು ಪರಿಶೀಲಿಸಿ ಪ್ರತಿ ವರ್ಗಕ್ಕೂ ಸೀಟು ಲಭ್ಯವಾಗುವಂತೆ, ರಾಜ್ಯದ ಹೊರಗಿನ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳಿಗೆ ಶೇ.10% ಮತ್ತು ರಾಜ್ಯದ ಒಳಗಿನ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳಿಗೆ ಶೇ.10%ರಷ್ಟು ಸೀಟುಗಳನ್ನು ನಿಗದಿಪಡಿಸಿ (ಸೂಪರ್‌ನ್ಯೂಮರರಿ) ಸಲ್ಲಿಸಿರುವ ಪಟ್ಟಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.21** | ಪಿಹೆಚ್.ಡಿ. ಸಂಶೋಧನಾ ಮಾರ್ಗದರ್ಶಕರಿಗೆ ಅಭ್ಯರ್ಥಿಯ ಪರಿಮಿತಿ ಸೀಮಿತಗೊಳಿಸುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದಿಂದ ಈಗಾಗಲೇ ಕೆಲವು ಮಾರ್ಗದರ್ಶಕರಿಗೆ ಹೆಚ್ಚುವರಿಯಾಗಿ ಅಭ್ಯರ್ಥಿಗಳನ್ನು ತೆಗೆದುಕೊಳ್ಳಲು ಅನುಮತಿಯನ್ನು ನೀಡಲಾಗಿದ್ದು, ಇಂತಹ ಅಭ್ಯರ್ಥಿಗಳು ಮಹಾಪ್ರಬಂಧವನ್ನು ಸಲ್ಲಿಸುವವರೆಗೂ ಹಚ್ಚುವರಿಯಾಗಿಯೇ ಮುಂದುವರೆಯಲು ಅವಕಾಶವನ್ನು ನೀಡಿ, ಇನ್ನು ಮುಂದೆ ಮಾರ್ಗದರ್ಶಕರಲ್ಲಿ ಖಾಲಿಯಾದ ಸ್ಥಾನಕ್ಕೆ ಪಿಎಚ್.ಡಿ. (4.5)ರ ನಿಯಮಾನುಸಾರ ನಿಗದಿಪಡಿಸಿರುವ ಸಂಖ್ಯೆಯ ಪರಿಮಿತಿಗೆ ಸೀಮಿತಗೊಳಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |

| | |
|---|---|
| **ಸಾಮಾನ್ಯ ಸಭೆ 2022/7.22** | ಏಪ್ರಿಲ್/ಮೇ 2022ರ ಮಾಹೆಯ ಮೊದಲನೇ ಚಾತುರ್ಮಾಸದ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳ ಪರೀಕ್ಷಾ ಕಾರ್ಯ ಚಟುವಟಿಕೆಗಳನ್ನು UUCMS (Unified University & College Management System) ತಂತ್ರಾಂಶ ಬಳಸಿ ಎಲ್ಲಾ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ನಿಯೋಜಿಸಲ್ಪಡುವ ಸಿಬ್ಬಂದಿ ವರ್ಗದವರುಗಳಿಗೆ ಸಂಭಾವನೆ ನಿಗದಿಪಡಿಸುವ ಬಗ್ಗೆ. |
| **ತೀರ್ಮಾನ** | ಸುಧೀರ್ಘವಾಗಿ ಚರ್ಚಿಸಿದ ಸಭೆಯು ಏಪ್ರಿಲ್/ಮೇ 2022ರ ಮಾಹೆಯ ಮೊದಲನೇ ಚಾತುರ್ಮಾಸದ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳ ಪರೀಕ್ಷಾ ಕಾರ್ಯ ಚಟುವಟಿಕೆಗಳನ್ನು UUCMS (Unified University & College Management System) ತಂತ್ರಾಂಶ ಬಳಸಿ ಎಲ್ಲಾ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ಹೊರಗುತ್ತಿಗೆಯ ಮೇಲೆ ಸಿಬ್ಬಂದಿಯನ್ನು ನಿಯೋಜಿಸಲು ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/7.23** | ಮೌಲ್ಯಮಾಪನವನ್ನು ಸಕಾಲಕ್ಕೆ ನಿರ್ವಹಿಸದೇ ಇರುವ ಅಧ್ಯಾಪಕರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗೆಗೆ. |
| **ತೀರ್ಮಾನ** | ಸುಧೀರ್ಘವಾಗಿ ಚರ್ಚಿಸಿದ ಸಭೆಯು ವಿದ್ಯಾರ್ಥಿಗಳ ಹಿತದೃಷ್ಟಿಯಿದ ಸಂಬಂಧಪಟ್ಟ ಪರೀಕ್ಷಾ ಮಂಡಳಿ ಅಧ್ಯಕ್ಷರುಗಳಿಗೆ ಮತ್ತು ಮೌಲ್ಯಮಾಪಕರಿಗೆ ನಿಗದಿತ ಅವಧಿಯಲ್ಲಿ ಮೌಲ್ಯಮಾಪನ ಕಾರ್ಯವನ್ನು ಪೂರ್ಣಗೊಳಸಬೇಕೆಂದು ಅಂತಿಮ ಸುತ್ತೋಲೆಯನ್ನು ಹೊರಡಿಸುವುದು ಹಾಗೂ ಅಂತಿಮ ಸುತ್ತೋಲೆ ಹೊರಡಿಸಿದ್ದರೂ ಮೌಲ್ಯಮಾಪನ ಕಾರ್ಯ ಪೂರ್ಣಗೊಳಸದ ಅಧ್ಯಾಪಕರುಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆಯನ್ವಯ ಕ್ರಮ ತೆಗೆದುಕೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/7.24** | ಶ್ರೀ ರವೀಂದ್ರ ಬಾಬು ಎ.ಎಸ್., ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ, ಸ್ನಾತಕೋತ್ತರ ಕೇಂದ್ರ, ಹಾಸನ ಇವರು ಯುಜಿಸಿ ನಿಗದಿಪಡಿಸಿರುವ ನೇಮಕಾತಿ ಅರ್ಹತೆಗಳ ನಿಯಮಗಳ ಪ್ರಕಾರ KSET ಅರ್ಹತೆಯನ್ನು ಹೊಂದಿದ ಹಿನ್ನೆಲೆಯಲ್ಲಿ ಯು.ಜಿ.ಸಿ. ವೇತನವನ್ನು ನಿಗದಿಪಡಿಸುವ ಬಗ್ಗೆ. |
| **ತೀರ್ಮಾನ** | ಶ್ರೀ ರವೀಂದ್ರ ಬಾಬು ಎ.ಎಸ್., ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ, ಸ್ನಾತಕೋತ್ತರ ಕೇಂದ್ರ, ಹಾಸನ ಇವರು ಯುಜಿಸಿ ನಿಗದಿಪಡಿಸಿರುವ ನೇಮಕಾತಿ ಅರ್ಹತೆಗಳ ನಿಯಮಗಳ ಪ್ರಕಾರ KSET ಅರ್ಹತೆಯನ್ನು ಪಡೆದ ದಿನಾಂಕದಿಂದ ಅನ್ವಯವಾಗುವಂತೆ ಯು.ಜಿ.ಸಿ. ವೇತನವನ್ನು ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.25** | "ಶ್ರೀ ಸಿದ್ಧರಾಮಯ್ಯ-75 ಅಮೃತ ಮಹೋತ್ಸವ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಪ್ರಕರಣ 29 (2) (r) ಪ್ರಕಾರ ದಾನಿಯು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. ೨೦ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. ೮೦ರಷ್ಟು ಹಣವನ್ನು B.A. L.L.B. in 5 years degree ಪರೀಕ್ಷೆಯಲ್ಲಿಅಧ್ಯಯನ ಮಾಡಿ, ಮೊದಲನೇ ಬಾರಿಗೆ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ "ಶ್ರೀ ಸಿದ್ಧರಾಮಯ್ಯ-75 ಅಮೃತಮಹೋತ್ಸವ" ರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲು ಹಾಗೂ ಮುಂಬರುವ ವಾರ್ಷಿಕ ಘಟಿಕೋತ್ಸವದಲ್ಲಿ ಸದರಿ ಚಿನ್ನದ ಪದಕವನ್ನು ಅರ್ಹ ಅಭ್ಯರ್ಥಿಗೆ ನೀಡಬೇಕೆಂದು ಡಿ. ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.26** | "ಭಾರತಿ ಮಹಿಳಾ ಸಮಾಜ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಪ್ರಕರಣ 29 (2) (r) ಪ್ರಕಾರ ದಾನಿಯು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. ೨೦ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ. ೮೦ರಷ್ಟು ಹಣವನ್ನು ಮಹಿಳಾ ಅಧ್ಯಯನ ವಿಷಯದ ಸ್ನಾತಕೋತ್ತರ ಪರೀಕ್ಷೆಯಲ್ಲಿ ಅಧ್ಯಯನ ಮಾಡಿ ಮೊದಲನೇ ಬಾರಿಗೆ ಅತಿ ಹೆಚ್ಚು ಅಂಕಗಳಿಸಿದ ಮಹಿಳಾ ವಿದ್ಯಾರ್ಥಿಗೆ "ಭಾರತಿ ಮಹಿಳಾ |

| | |
|---|---|
| | ಸಮಾಜ" ರವರ ಹೆಸರಿನಲ್ಲಿ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡಲು ಹಾಗೂ ಮುಂಬರುವ ವಾರ್ಷಿಕ ಘಟಿಕೋತ್ಸವದಲ್ಲಿ ಸದರಿ ಚಿನ್ನದ ಪದಕವನ್ನು ಅರ್ಹ ಅಭ್ಯರ್ಥಿಗೆ ನೀಡಬೇಕೆಂದು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/7.27 | ಅರ್ಕ ಮಹಾವಿದ್ಯಾಲಯ, ಬೋಗಾದಿ-ಗದ್ದಿಗೆ ರಸ್ತೆ, ಮಾದಹಳ್ಳಿ, ಮೈಸೂರು, ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ Certificate Program in Community Development ಕೋರ್ಸ್ ಅನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಪರೀವಿಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of certain Institutions for specified studies/specialized and Research Statutes 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ಅರ್ಕ ಮಹಾವಿದ್ಯಾಲಯ, ಬೋಗಾದಿ ರಸ್ತೆ, ಮಾದಹಳ್ಳಿ, ಮೈಸೂರು, ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೊಸದಾಗಿ Certificate Program in Community Development ಕೋರ್ಸ್‌ನ್ನು ಪ್ರತಿ ಕೋರ್ಸಿಗೆ 40 ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ 2022-23ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/7.28 | ಸಮಾಜಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಮತ್ತು Dr. Ambedkar Chamber of Commerce-DACC, (Regd.), and Forum of Scheduled Castes and Scheduled Tribes Legislators and Parliamentarians (FSCSTLP) Regd. Ludhiana ಸಂಸ್ಥೆಗಳೊಡನೆ ಮಾಡಿಕೊಂಡಿರುವ ಒಡಂಬಡಿಕೆಯ ಅನುಸಮರ್ಥನೆಗಾಗಿ. |
| ತೀರ್ಮಾನ | Dr. Ambedkar Chamber of Commerce-DACC, (Regd.), and Forum of Scheduled Castes and Scheduled Tribes Legislators and Parliamentarians (FSCSTLP) Regd. Ludhiana ಸಂಸ್ಥೆಗಳು "ಸಮಾಜ ಕಾರ್ಯ ಅಧ್ಯಯನ ವಿಭಾಗದ ಪ್ರತಿಕ್ಷಣಾರ್ಥಿಗಳಿಗೆ ಕ್ಷೇತ್ರ ಕಾರ್ಯಕ್ಕೆ ಭೇಟಿ ನೀಡಿ ಹಿಂದುಳಿದ ಗ್ರಾಮಗಳಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳ ಮತ್ತು ಮಹಿಳೆಯರ ಅಭಿವೃದ್ಧಿಗಾಗಿ ವಿಚಾರ ಸಂಕಿರಣ, ಕಾರ್ಯಾಗಾರ, ಸರ್ಕಾರದ ಕಾರ್ಯಕ್ರಮಗಳ ಕುರಿತು ಅರಿವು ಮೂಡಿಸುವುದು, ಸ್ವಸಹಾಯ ಸಂಘದ ಸಹಾಯದಿಂದ ಗ್ರಾಮೀಣ ವಿಭಾಗದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ಮತ್ತು ಮಹಿಳೆಯರು ಸಬಲರಾಗಲು ತರಬೇತಿ ನೀಡುವ" ಉದ್ದೇಶಕ್ಕಾಗಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ಮೂಲಕ ವಿಶ್ವವಿದ್ಯಾನಿಲಯದೊಡನೆ ದಿನಾಂಕ: 23-09-2022 ರಂದು ಮಾಡಿಕೊಂಡಿರುವ ಒಡಂಬಡಿಕೆಗೆ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/7.29 | 2018-19ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ. |
| ತೀರ್ಮಾನ | 2018-19ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ವಿಶ್ವವಿದ್ಯಾನಿಲಯವು ಸಿದ್ಧಪಡಿಸಲಾಗಿರುವ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಕಳುಹಿಸಲು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/7.30 | Payment of Special Fee in favour of Sri P.D. Medappa, University Advocate, Mysuru in connection with the Original Suit bearing No. 1395/2011 filed by Cosmopolitan Club against the University of Mysore in the Third Additional Civil Judge and JMFC at Mysuru-reg. |
| ತೀರ್ಮಾನ | APPROVED |

| | |
|---|---|
| **ಸಾಮಾನ್ಯ ಸಭೆ 2022/7.31** | ಸಹಾಯಕ ಕಾರ್ಯಪಾಲಕ ಅಭಿಯಂತರರ ಒಂದು ಹುದ್ದೆಯನ್ನು ಸೃಜಿಸಿದ ನಂತರ ಆಗಿರುವ ಸಮಸ್ಯೆಯ ಬಗೆಗೆ. |
| **ತೀರ್ಮಾನ** | ವಿವಿ ಆದೇಶ ಸಂಖ್ಯೆ: ಇಟಿ.4/235/2016-17, ದಿನಾಂಕ: 10-06-2020 ರನ್ವಯ ಹೆಚ್ಚುವರಿಯಾಗಿ ಸೃಜಿಸಿರುವ ಸಂಖ್ಯಾತಿರಿಕ್ತ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಗಿರೀಶ್.ಜಿ.ಎಚ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶೇಷ ಉಪವಿಭಾಗ, ಮೈಸೂರು ಇವರನ್ನು ಮಾತೃ ವಿಭಾಗಕ್ಕೆ ಹಿಂದಿರುಗಿಸಲು ವಿಶ್ವವಿದ್ಯಾನಿಲಯದ ವತಿಯಿಂದ ಸರ್ಕಾರಕ್ಕೆ ಪತ್ರ ಬರೆಯುವುದು. ತದನಂತರ, ಶ್ರೀ ಶಿವಲಿಂಗಪ್ರಸಾದ್.ಆರ್.ಪಿ., ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ವವಿದ್ಯಾನಿಲಯ ತಾಂತ್ರಿಕ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಕರ್ನಾಟಕ ಸರ್ಕಾರದ ಹೆಚ್.ಆರ್.ಎಂ.ಎಸ್ ವೇತನ ತಂತ್ರಾಂಶದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಪದನಾಮವನ್ನು ನಮೂದಿಸಲು ಕ್ರಮ ವಹಿಸಬೇಕೆಂದು ಸಭೆಯಲ್ಲಿ ನಿರ್ಣಯಿಸಲಾಯಿತು. |
| **ಸಾಮಾನ್ಯ ಸಭೆ 2022/7.32** | ಶ್ರೀ ಎಂ.ಎಂ. ಶ್ರೀಕಂಠಸ್ವಾಮಿ, ಪ್ರಥಮ ದರ್ಜೆ ಗುಮಾಸ್ತರು, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| **ತೀರ್ಮಾನ** | ಶ್ರೀ ಎಂ.ಎಂ. ಶ್ರೀಕಂಠಸ್ವಾಮಿ, ಪ್ರಥಮ ದರ್ಜೆ ಗುಮಾಸ್ತರು, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಜರುಗಿಸುವ ಸಂಬಂಧ ಸುದೀರ್ಘವಾಗಿ ಚರ್ಚಿಸಿದ ಸಭೆಯು ಕಾನೂನಾತ್ಮಕವಾಗಿ ಕ್ರಮ ತೆಗೆದುಕೊಳ್ಳುವಂತೆ ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/7.33** | Universal Institute for Private Training, Kuwait ಇವರು Specialized Programme ಅಡಿಯಲ್ಲಿ ನಡೆಸುತ್ತಿರುವ BBA (Marketing & Human Resource) ಕೋರ್ಸ್‌ಗೆ ಹೆಚ್ಚುವರಿಯಾಗಿ 40 ಪ್ರವೇಶಾತಿಗಳಿಗೆ ಅನುಮತಿ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ Universal Institute for Private Training, Moghera Bin Shoba Street, P.O. Box 6938, Salmiya, Kuwait-2204 ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಮಾನ್ಯತೆ ಪಡೆದು ನಡೆಸುತ್ತಿರುವ BBA (Marketing & Human Resource) ಕೋರ್ಸ್‌ಗೆ 2022-23ನೇ ಸಾಲಿನಿಂದ ಹೆಚ್ಚುವರಿಯಾಗಿ 40 ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯಾಮಿತಿಗೆ ಅನುಮತಿ ನೀಡಲು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.34** | ಪ್ರೊ. ಸಿ.ನಾಗಣ್ಣ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಅವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಕೋರಿರುವ ಬಗ್ಗೆ. |
| **ತೀರ್ಮಾನ** | ಪ್ರೊ. ಸಿ.ನಾಗಣ್ಣ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರನ್ನು 2022-23ನೇ ಶೈಕ್ಷಣಿಕ ಸಾಲಿಗೆ ದಿನಾಂಕ: 27-10-2022 ರಿಂದ ಜಾರಿಗೆ ಬಂದಂತೆ ಮತ್ತೊಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಮಾಹೆಯಾನ ರೂ.25,000/-ಗಳ ಗೌರವಧನದೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಲು ಸಭೆಯು ಅನುಮೋದಿಸಿತು. |

| | |
|---|---|
| ಸಾಮಾನ್ಯ ಸಭೆ 2022/7.35 | ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷಾ ಶುಲ್ಕಗಳನ್ನು ಪ್ರವೇಶಾತಿ ವೇಳೆಯಲ್ಲಿ ಪಾವತಿಸಿಕೊಳ್ಳುವ ಬಗ್ಗೆ. |
| ತೀರ್ಮಾನ | ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷಾ ಶುಲ್ಕಗಳನ್ನು ಪ್ರವೇಶಾತಿ ವೇಳೆಯಲ್ಲಿ ಪಾವತಿಸಿಕೊಳ್ಳುವ ಸಂಬಂಧ ಸುದೀರ್ಘವಾಗಿ ಚರ್ಚಿಸಿದ ಸಭೆಯು ಈ ಕೆಳಕಂಡ ಅಂಶಗಳನ್ನೊಳಗೊಂಡಂತೆ ಪ್ರಕಟಣೆ ಹೊರಡಿಸಲು ನಿರ್ಧರಿಸಲಾಯಿತು.<br>1) ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪ್ರವೇಶಾತಿ ಮುಗಿದ 60 ದಿನಗಳ ನಂತರ ಪರೀಕ್ಷಾ ಶುಲ್ಕಗಳನ್ನು ಪಾವತಿಸುವ ಸಂಬಂಧ ಅಧಿಕೃತ ಪ್ರಕಟಣೆ ಹೊರಡಿಸುವುದು.<br>2) ಒಂದು ವೇಳೆ ಅಂತಿಮ ದಿನಾಂಕದೊಳಗೆ ಪರೀಕ್ಷಾ ಶುಲ್ಕಗಳನ್ನು ಪಾವತಿಸದ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ವಿನಾಯಿತಿ ನೀಡದಿರುವುದು.<br>3) ಕಡ್ಡಾಯವಾಗಿ ಶೇ.75 ಹಾಗೂ ಅದಕ್ಕಿಂತ ಹೆಚ್ಚಿನ ಹಾಜರಾತಿಯನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಡುವುದು ಹಾಗೂ ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದರೂ ಸಹ ಶೇ.75 ಕ್ಕಿಂತ ಕಡಿಮೆ ಹಾಜರಾತಿಯನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬಾರದು. ಹಾಗೆಯೇ ಪರೀಕ್ಷಾ ಶುಲ್ಕವನ್ನು ಮರು ಪಾವತಿಸಲಾಗುವುದಿಲ್ಲವೆಂದು ಸಹ ತಿಳಿಸುವುದು. |
| ಸಾಮಾನ್ಯ ಸಭೆ 2022/7.36 | ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಪೂರ್ಣಕಾಲಿಕ ನಿರ್ದೇಶಕರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಸುದೀರ್ಘವಾಗಿ ಚರ್ಚಿಸಿದ ಸಿಂಡಿಕೇಟ್ ಸಭೆಯು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ಲಭ್ಯವಿರುವ ಅರ್ಹ ಸಂಶೋಧನಾ ಸಹಾಯಕರೊಬ್ಬರಲ್ಲಿ ಅವರು ಪ್ರಕಟಿಸಿರುವ ಸಂಶೋಧನಾ ಪ್ರಕಟಣೆಗಳು ಮತ್ತು ಶೈಕ್ಷಣಿಕ ಅರ್ಹತೆಯ ಆಧಾರದ ಮೇಲೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಪೂರ್ಣಕಾಲಿಕ ನಿರ್ದೇಶಕರನ್ನು ಮತ್ತು ಉಪ ನಿರ್ದೇಶಕರನ್ನು ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/7.37 | ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಹಾಸ್ಟೆಲ್ (ವಿದ್ಯಾರ್ಥಿನಿಲಯ) ಉಪಸಮಿತಿ ವರದಿ ಮೇಲೆ ಕ್ರಮ ಕೈಗೊಂಡಿರುವ ಬಗ್ಗೆ ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಬಗೆಗೆ. |
| ತೀರ್ಮಾನ | ಮುಂದೂಡಲಾಯಿತು |
| ಸಾಮಾನ್ಯ ಸಭೆ 2022/7.38 | Retirement of Teachers of Constituent Colleges during the Calendar Year-2023. |
| ತೀರ್ಮಾನ | Retirement of Teachers of Constituent Colleges during the Calendar Year-2023 approved by the Syndicate. |
| ಸಾಮಾನ್ಯ ಸಭೆ 2022/7.39 | ಪಿಂಚಣಿ ಅದಾಲತ್ ಸ್ಥಾಪಿಸುವ ಕುರಿತು. |
| ತೀರ್ಮಾನ | ಕೆಸಿಎಸ್‌ಆರ್ ನಿಯಮಾವಳಿಯಂತೆ ಯಾವುದೇ ಪಿಂಚಣಿ ಅದಾಲತ್ ಸ್ಥಾಪಿಸಲು ಅವಕಾಶವಿರುವುದಿಲ್ಲ ಹಾಗೂ ಸರ್ಕಾರದ ಯಾವುದೇ ಇಲಾಖೆಯಲ್ಲಿಯೂ ಪಿಂಚಣಿ ಅದಾಲತ್ ಸ್ಥಾಪಿಸಿರುವ ಬಗ್ಗೆ ಮಾಹಿತಿ ಇಲ್ಲದಿರುವುದರಿಂದ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿಂಚಣಿ ಅದಾಲತ್ ಸ್ಥಾಪಿಸುವ ಬದಲು "ಪಿಂಚಣಿದಾರರ ಕುಂದು-ಕೊರತೆಗಳ ಘಟಕ" ತೆರೆಯಲು ಹಾಗೂ ಸದರಿ ಘಟಕಕ್ಕೆ ಮಾನ್ಯ ಕುಲಸಚಿವರನ್ನು ಅಧ್ಯಕ್ಷರನ್ನಾಗಿ, ಹಣಕಾಸು ಅಧಿಕಾರಿಗಳು ಹಾಗೂ ಇಬ್ಬರು ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ನಾಮನಿರ್ದೇಶನ ಮಾಡಲು ಸಭೆಯಲ್ಲಿ ನಿರ್ಣಯಿಸಲಾಯಿತು. |

| | |
|---|---|
| ಸಾಮಾನ್ಯ ಸಭೆ 2022/7.40 | ಮೈಸೂರು ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳ ಆಯ್ಕೆಗಾಗಿ ಶೋಧನಾ ಸಮಿತಿ ರಚಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳ ಆಯ್ಕೆಗಾಗಿ ಶೋಧನಾ ಸಮಿತಿಯನ್ನು ರಚಿಸಲು ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 14 ರಡಿಯಲ್ಲಿ, ನಾಮನಿರ್ದೇಶಿಸಲು ಸಿಂಡಿಕೇಟ್‌ನ ಹಲವು ಸದಸ್ಯರುಗಳು ಸೂಚಿಸಿದಂತೆ ಡಾ. ಶ್ರೀವಾರಿ ಚಂದ್ರಶೇಖರ್, ಕಾರ್ಯದರ್ಶಿಗಳು, ಡಿ.ಎಸ್.ಟಿ., ನವದೆಹಲಿ, ಡಾ. ವಿ.ರವಿಚಂದ್ರನ್, ನಿರ್ದೇಶಕರು, ಎನ್.ಐ.ಪಿ.ಇ.ಆರ್, ಕಲ್ಕತ್ತ, ಡಾ. ಶ್ರೀನಿವಾಸ ರೆಡ್ಡಿ, ನಿರ್ದೇಶಕರು, ಸಿ.ಎಸ್.ಐ.ಆರ್., ಲಕ್ನೊ, ಡಾ. ಕೆ.ಚಿದಾನಂದಗೌಡ, ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ, ಡಾ. ಶ್ರೀನಿವಾಸ ಬಳ್ಳಿ, ಕುಲಪತಿಗಳು, ನೃಪತುಂಗ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಬುಡಕಟ್ಟು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ.ಕಟ್ಟಿಮನಿ, ಇವರಲ್ಲಿ ಒಬ್ಬರನ್ನು ನಾಮನಿರ್ದೇಶಿಸುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಇವರಲ್ಲಿ ಒಬ್ಬರನ್ನು ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ನಾಮನಿರ್ದೇಶಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/7.41 | Distance Education Examination Fee Structure for Repeaters UG/PG Courses. |
| ತೀರ್ಮಾನ | The Syndicate has ratified the action taken by the University with regard to the Examination fee structure and Directorate of Distance Education annual consolidated fee structure of various courses, fixed based on the ratio for regular courses in the University. |
| ಸಾಮಾನ್ಯ ಸಭೆ 2022/7.42 | ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು ಇವರು ಕೆಳಕಂಡ ಮಾಹಿತಿಯನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲು ಕೋರಿರುವ ಬಗ್ಗೆ. |
| ತೀರ್ಮಾನ | ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು ಇವರು ಕೋರಿರುವ ಈ ಕೆಳಕಂಡ ಮಾಹಿತಿಗಳನ್ನು ಗಮನಿಸಿದ ಸಭೆಯು ಕ್ರಮ ತೆಗೆದುಕೊಳ್ಳಲು ಒಪ್ಪಿಗೆ ಸೂಚಿಸಿತು.<br>1) ಘಟಕ ಕಾಲೇಜು, ತೆರಕಣಾಂಬಿ ಕಾಲೇಜಿಗೆ ಅವಶ್ಯಕವಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರೊಂದಿಗೆ, ಗಣಕ ಯಂತ್ರಗಳನ್ನು ಸಹ ನೀಡುವುದು.<br>2) ವೈಯಕ್ತಿಕವಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಪ್ರಸ್ತಾವನೆಗಳನ್ನು ಸಭೆಯಲ್ಲಿ ಮಂಡಿಸಲಾಗುವುದು ಹಾಗೂ ತೀರ್ಮಾನವಾದ ಪ್ರಸ್ತಾವನೆಗಳ ಕ್ರಮ ಕೈಗೊಂಡಿರುವ ಮಾಹಿತಿಯನ್ನು ವಿಶ್ವವಿದ್ಯಾನಿಲಯದಿಂದ ಒದಗಿಸಲಾಗುವುದು. |
| ಸಾಮಾನ್ಯ ಸಭೆ 2022/7.43 | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/7.44 | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಮೋದಿಸಿತು. |

| | |
|---|---|
| **ಸಾಮಾನ್ಯ ಸಭೆ 2022/7.45** | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| **ತೀರ್ಮಾನ** | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.46** | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| **ತೀರ್ಮಾನ** | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.47** | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| **ತೀರ್ಮಾನ** | 2022-23ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.48** | 2022-23ನೇ ಶೈಕ್ಷಣಿಕ ಸಾಲಿನ ಮಂಡ್ಯ ಜಿಲ್ಲೆ, ಮದ್ದೂರು ತಾ., ಭಾರತೀನಗರದ ಭಾರತೀ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| **ತೀರ್ಮಾನ** | 2022-23ನೇ ಶೈಕ್ಷಣಿಕ ಸಾಲಿನ ಮಂಡ್ಯ ಜಿಲ್ಲೆ, ಮದ್ದೂರು ತಾ., ಭಾರತೀನಗರದ ಭಾರತೀ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.49** | 2022-23ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| **ತೀರ್ಮಾನ** | 2022-23ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.50** | 2022-23ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| **ತೀರ್ಮಾನ** | 2022-23ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಗಮನಿಸಿದ ಸಭೆಯು ಅನುಮೋದಿಸಿತು. |

| | |
|---|---|
| **ಸಾಮಾನ್ಯ ಸಭೆ 2022/7.51** | 2022-23ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| **ತೀರ್ಮಾನ** | 2022-23ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/7.52** | ಉನ್ನತ ಶಿಕ್ಷಣ ಇಲಾಖೆಯಡಿಯ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಇರಬೇಕಾದ ಪೀಠಗಳ ಸಂಖ್ಯೆಯನ್ನು ನಿರ್ಧರಿಸುವ ಬಗೆಗೆ. |
| **ತೀರ್ಮಾನ** | ಮುಂದೂಡಲಾಯಿತು |
| **ಸಾಮಾನ್ಯ ಸಭೆ 2022/7.53** | ಮೈ.ವಿ.ವಿ.ಯ ಕುಕ್ಕರಹಳ್ಳಿ ಕೆರೆಯ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರ 2007-08ರ ಬಜೆಟ್‌ನಲ್ಲಿ ಎರಡು ಕೋಟಿ ರೂ. ಪ್ರವಾಸೋದ್ಯಮ ಇಲಾಖೆಗೆ ನೀಡಿದ್ದು, ಉಳಿದಿರಬಹುದಾದ ಹಣದಲ್ಲಿ ಮೋಟಾರ್ ಅಳವಡಿಸಿರುವ ಸುಸಜ್ಜಿತವಾದ ದೋಣಿಯನ್ನು ಕೊಂಡು ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗಕ್ಕೆ ನೀಡುವ ಬಗ್ಗೆ. |
| **ತೀರ್ಮಾನ** | ಮೈ.ವಿ.ವಿ.ಯ ಕುಕ್ಕರಹಳ್ಳಿ ಕೆರೆಯ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರ 2007-08ರ ಬಜೆಟ್‌ನಲ್ಲಿ ಎರಡು ಕೋಟಿ ರೂ.ಗಳನ್ನು ಪ್ರವಾಸೋದ್ಯಮ ಇಲಾಖೆಗೆ ನೀಡಿದ್ದು, ಉಳಿದಿರಬಹುದಾದ ಹಣದಲ್ಲಿ ಮೋಟಾರ್ ಅಳವಡಿಸಿರುವ ಸುಸಜ್ಜಿತವಾದ ದೋಣಿಯನ್ನು ಖರೀದಿಸಿ ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗಕ್ಕೆ ನೀಡಲು ಸಭೆಯು ಅನುಮತಿಸಿತು. |
| **ಸಾಮಾನ್ಯ ಸಭೆ 2022/7.54** | ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯರವರ ಪ್ರತಿಮೆ ಸ್ಥಾಪಿಸುವ ಕುರಿತು. |
| | ಡಾ.ಹೆಚ್.ಶಶಿಧರ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬ್ರಿಗೇಡ್ ಫೌಂಡೇಶನ್, ಮಲ್ಲೇಶ್ವರಂ, ಬೆಂಗಳೂರು ಇವರು ಮೈಸೂರು ವಿಶ್ವವಿದ್ಯಾನಿಲಯದ ಆವರಣದ ಪ್ರಮುಖ ಸ್ಥಳದಲ್ಲಿ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಇವರ ಸ್ಮರಣಾರ್ಥವಾಗಿ ಪ್ರತಿಮೆಯನ್ನು ಸ್ಥಾಪಿಸಲು ಅವಕಾಶ ಕಲ್ಪಿಸುವಂತೆ ಸನ್ಮಾನ್ಯ ಡಾ. ಅಶ್ವಥ್ ನಾರಾಯಣ್.ಸಿ.ಎನ್, ಮಾನ್ಯ ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಮನವಿ ಸಲ್ಲಿಸಿರುತ್ತಾರೆ. ಈ ಸಂಬಂಧ ಮಾನ್ಯ ಸಚಿವರು ಮೈಸೂರು ವಿಶ್ವವಿದ್ಯಾನಿಯದ ಆವರಣದಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಇವರ ಸ್ಮರಣಾರ್ಥವಾಗಿ ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಪೂರ್ಣ ಪ್ರಮಾಣದ ಪ್ರತಿಮೆಯನ್ನು ಸ್ಥಾಪಿಸಲು ಸೂಕ್ತ ಸ್ಥಳಾವಕಾಶ ಕಲ್ಪಿಸುವಂತೆ ಮಾನ್ಯ ಕುಲಪತಿಯವರಿಗೆ ಪತ್ರ ಮುಖೇನ ಸೂಚಿಸಿರುತ್ತಾರೆ. ಹಾಗೂ ದಿನಾಂಕ: 03-06-2019ರಂದು ನಡೆದ ಉನ್ನತ ಶಿಕ್ಷಣ ಪರಿಷತ್ತಿನ 21ನೇ ಸಾಮಾನ್ಯ ಸಭೆಯ ಟೇಬಲ್ ಅಜೆಂಡಾದಲ್ಲಿ "ವಿಶ್ವವಿದ್ಯಾನಿಯಗಳಲ್ಲಿ ಹಿಂದಿನಿಂದಲೂ ಸ್ಥಾಪಿತಗೊಂಡಿರುವ ವಿಗ್ರಹಗಳನ್ನು ಹೊರತುಪಡಿಸಿ, ಇನ್ನು ಮುಂದೆ ವಿಶ್ವವಿದ್ಯಾನಿಲಯಗಳಲ್ಲಿ ಸರಸ್ವತಿ ವಿಗ್ರಹವನ್ನು ಬಿಟ್ಟು ಬೇರೆ ಯಾವುದೇ ವಿಗ್ರಹಗಳನ್ನು ಸ್ಥಾಪಿಸಬಾರದೆಂದು ತೀರ್ಮಾನಿಸಿ ಹಾಗೂ ಇನ್ನು ಮುಂದೆ ಕಡ್ಡಾಯವಾಗಿ ಸರ್ಕಾರದ ಅನುಮತಿಯೊಂದಿಗೆ ಸ್ಥಾಪಿಸಬೇಕೆಂದು" ನಿರ್ಣಯಿಸಿರುವ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಮಾನಸಗಂಗೋತ್ರಿಯಲ್ಲಿರುವ "ಸ್ಕೂಲ್ ಆಫ್ ಇಂಜಿನಿಯರಿಂಗ್" ಆವರಣದಲ್ಲಿ ಸ್ಥಾಪಿಸಲು ಪತ್ರ ಬರೆದು ಅನುಮತಿ ಪಡೆಯಲು ಸಭೆಯಲ್ಲಿ ನಿರ್ಧರಿಸಲಾಯಿತು. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ "ಸ್ಕೂಲ್ ಆಫ್ ಇಂಜಿನಿಯರಿಂಗ್" ಆವರಣದಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಇವರ ಸ್ಮರಣಾರ್ಥವಾಗಿ ಪೂರ್ಣ ಪ್ರಮಾಣದ ಪ್ರತಿಮೆಯನ್ನು ಸ್ಥಾಪಿಸಲು ಅನುಮತಿ ನೀಡುವಂತೆ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು. |

| | |
|---|---|
| ಸಾಮಾನ್ಯ ಸಭೆ 2022/7.55 | ವಿಶ್ವವಿದ್ಯಾನಿಲಯದ ಘಟಕ ಕಾಲೇಜು, ತೆರಕಣಾಂಬಿಯ ಕಾಲೇಜಿಗೆ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರ ಹೆಸರನ್ನು ನಾಮಾಂಕಿತಗೊಳಸುವ ಬಗ್ಗೆ. |
| ತೀರ್ಮಾನ | ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮನವಿಯನ್ನು ಪುರಸ್ಕರಿಸಿದ ಸಭೆಯು ವಿಶ್ವವಿದ್ಯಾನಿಲಯದ ಘಟಕ ಕಾಲೇಜು, ತೆರಕಣಾಂಬಿಯ ಕಾಲೇಜಿಗೆ ಮಾಜಿ ರಾಷ್ಟ್ರಪತಿಗಳಾದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರ ಹೆಸರನ್ನು ನಾಮಾಂಕಿತಗೊಳಸಲು ಒಪ್ಪಿಗೆ ಸೂಚಿಸಿತು. |
| ಸಾಮಾನ್ಯ ಸಭೆ 2022/7.56 | Promotions to University Teachers under UGC-CAS |
| ತೀರ್ಮಾನ | The recommendations of the Selection Committee and Screening cum Evaluation Committee in various subjects for promotion of teachers in various desciplines to the next academic level furnished at Annexure-'A' is approved. Further, the Syndicate has also decided to extend the monetary benefits to the teachers from the date of the decision of the Syndicate. |

**ಇತರೆ ವಿಷಯಗಳು:**

1) ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ವಿಷಯ ಸಂಖ್ಯೆ: 7.43 ರಿಂದ 7.51 ರವರೆಗೆ ಸಂಬಂಧಿಸಿದ ಸ್ವಾಯತ್ತತಾ ಕಾಲೇಜುಗಳಗೆ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡುವ ಸಂಬಂಧ ರಚಿಸಲಾಗಿರುವ ಪರಾಮರ್ಶನಾ ಸಮಿತಿಯಲ್ಲಿ ಡೀನರುಗಳನ್ನಾಗಲೀ/ಹಿರಿಯ ಪ್ರಾಧ್ಯಾಪಕರುಗಳನ್ನಾಗಲೀ ನೇಮಕ ಮಾಡದಿರುವುದು ಕಂಡು ಬಂದಿದೆ. ಡೀನರು / ವಿಷಯತಜ್ಞ ಪ್ರಾಧ್ಯಾಪಕರು / ಸಿಂಡಿಕೇಟ್ ಸದಸ್ಯರುಗಳನ್ನು ಒಳಗೊಂಡಂತೆ ಪರಾಮರ್ಶನಾ ಸಮಿತಿ ರಚಿಸುವುದು ನಿಯಮವಾಗಿರುತ್ತದೆ. ಆದರೆ, ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರು ಮೇಲೆ ತಿಳಿಸಿರುವಂತೆ ಯಾರನ್ನೂ ಪರಾಮರ್ಶನಾ ಸಮಿತಿ ರಚನೆಯಲ್ಲಿ ನಾಮನಿರ್ದೇಶನ ಮಾಡಿಲ್ಲದಿರುವುದರಿಂದ ವಿಷಯ ಸಂಖ್ಯೆ: 7.43 ರಿಂದ 7.51 ರವರೆಗೆ ಸಭೆಯು ಅನುಮೋದಿಸಲು ಸಾಧ್ಯವಿಲ್ಲವೆಂದು ಪ್ರಸ್ತಾಪಿಸಿದರು. ಈ ಪ್ರಸ್ತಾವನೆಗೆ ಸಿಂಡಿಕೇಟ್ ಸದಸ್ಯರುಗಳು ಬೆಂಬಲ ಸೂಚಿಸಿ, ವಿಷಯ ಸಂಖ್ಯೆ: 7.43 ರಿಂದ 7.51 ರವರೆಗೆ ವಿಷಯಗಳನ್ನು ಅನುಮೋದನೆ ನೀಡಲು ಸಾಧ್ಯವಿಲ್ಲವೆಂದು ತಿಳಿಸಿ, ಒಂದು ವೇಳೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸದರಿ ಸ್ವಾಯತ್ತತಾ ಕಾಲೇಜುಗಳಗೆ ಅನುಮೋದನೆ ನೀಡುವುದು ಅವಶ್ಯಕವಾದರೆ ಸಭೆಯು ಅನುಮೋದನೆ ನೀಡಿ, ಈ ಸಂಬಂಧ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಿಗೆ ಷೋಕಾಸ್ ನೋಟಿಸ್ ಜಾರಿಗೊಳಸಬೇಕೆಂದು ತಿಳಿಸಿದರು.

   ಸುದೀರ್ಘವಾಗಿ ಚರ್ಚಿಸಿದ ಸಭೆಯು ವಿಷಯ ಸಂಖ್ಯೆ: 7.43 ರಿಂದ 7.51 ರವರೆಗೆ ಸಂಬಂಧಿಸಿದ ಸ್ವಾಯತ್ತತಾ ಕಾಲೇಜುಗಳಗೆ ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು ಸಭೆಯು ಅನುಮೋದಿಸಿತು ಹಾಗೂ ಸದರಿ ಕಾಲೇಜುಗಳಗೆ ರಚಿಸಲಾಗಿದ್ದ ಪರಾಮರ್ಶನ ಸಮಿತಿಗಳಗೆ ಡೀನರು / ವಿಷಯತಜ್ಞ ಪ್ರಾಧ್ಯಾಪಕರು / ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡದಿರುವುದರಿಂದ ನಿರ್ದೇಶಕರಿಗೆ ಇನ್ನು ಮುಂದೆ ವಿ.ವಿ. ಕಾಯ್ದೆ, ಅಧಿನಿಯಮ, ಸರ್ಕಾರದಿಂದ ಆಗಾಗ್ಗೆ ಹೊರಡಿಸುವ ನಿರ್ದೇಶನಗಳ ಅನುಸಾರ ಪರಾಮರ್ಶನ ಸಮಿತಿ ರಚಿಸುವಂತೆ ಸೂಚಿಸಿ ಪತ್ರ ಬರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು.

2. ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಶತಮಾನೋತ್ಸವ ಟ್ರಸ್ಟ್ ವತಿಯಿಂದ 2022-23ನೇ ಸಾಲಿನಲ್ಲಿ 1) Bharat Ratna Sri M.Visvesvaraya Centenary Award for Innovation Technology, 2) Bharat Ratna Dr. S.Radhakrishnan Centenary Award for Social Sciences and 3) Bharat Ratna Prof.C.N.R.Rao Centenary Award for Science ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡಲು ಪ್ರಕಟಣೆ (ವಿಶ್ವವಿದ್ಯಾನಿಲಯ ಸಂಖ್ಯೆ: ಜಿಎಲ್.2/219/2015-16, ದಿನಾಂಕ: 19-10-2022) ಹೊರಡಿಸಿರುವ ಅನ್ವಯ ಆಯಾ ವಿಷಯಕ್ಕೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಅತ್ಯುನ್ನತ ಸೇವೆ ಸಲ್ಲಿಸಿದವರಿಗೆ ಪ್ರದಾನ ಮಾಡಲಾಗುತ್ತದೆ ಹಾಗೂ ಈ ಸಂಬಂಧ ಅರ್ಹರಾದವರು ದಿನಾಂಕ: 31-10-2022 ರೊಳಗೆ ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ ಎಂದು ಸಭೆಯಲ್ಲಿ ಮಾಹಿತಿ ನೀಡಿದರು.

3) ಮಾನ್ಯ ಕುಲಪತಿಗಳು ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳು ಶಿಷ್ಯವೇತನವನ್ನು ಹೆಚ್ಚಿಸಬೇಕೆಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿರುವ ಹಿನ್ನೆಲೆಯಲ್ಲಿ, ತೆಗೆದುಕೊಳ್ಳಬಹುದಾದ ಕ್ರಮವನ್ನು ಸಭೆಯು ನಿರ್ಧರಿಸಬೇಕೆಂದು ತಿಳಿಸಿದರು. ಈ ಸಂಬಂಧ ಡಾ. ಚೈತ್ರ ನಾರಾಯಣ, ಶ್ರೀ ಎಸ್.ಡಿ.ದೊಡ್ಡಚಾರಿ ಹಾಗೂ ಶ್ರೀಮತಿ ಪವಿತ್ರ ಅವರುಗಳು ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದಿಂದ ಶಿಷ್ಯವೇತನವನ್ನು ಹೆಚ್ಚಿಸಿದರೆ, OBC ವಿದ್ಯಾರ್ಥಿಗಳಿಗೂ ತಾರತಮ್ಯವಿಲ್ಲದೆ ವಿಶ್ವವಿದ್ಯಾನಿಲಯದ ವತಿಯಿಂದ ಶಿಷ್ಟವೇತನವನ್ನು ಹೆಚ್ಚಿಸಬೇಕೆಂದು ಆಗ್ರಹಿಸಿದರು.

ಈ ಸಂಬಂಧ ಸುದೀರ್ಘವಾಗಿ ಚರ್ಚಿಸಿದ ಸಭೆಯು ಈ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಮುಂದಿನ ಸಭೆಗೆ ವಿಷಯವನ್ನು ಮುಂದೂಡಲು ಸಿಂಡಿಕೇಟ್ ತೀರ್ಮಾನಿಸಿತು.

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ** | **ಕುಲಪತಿಗಳು ಮತ್ತು ಅಧ್ಯಕ್ಷರು**